ಒನಾ. ಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವ್ಯಾಪ್ತಿ ಕ್ರಮಾಂಕ Accession No. (1)
ದಿನಾಂಕ Date.....

MYSORE LEGISLATIVE ASSEMBLY

TWENTIETH DAY

Tuesday, 25th March 1958.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS

SECRETARY.—Question No. 376 in the Tenth List.

Sri G. N. PUTTANNA:—Sir, I may be given some time to read the question and put supplementaries.

MR. SPEAKER.—It may be taken up at the end.

Restoration and Repairs of Breached Tanks in Kolar District.

Q.—1018. Sri H. C. LINGA REDDY (Malur).—

Will the Government be pleased to state :—

(*a*) the number of tanks restored and repaired out of the tanks that were breached by the rains last year in Kolar district ;

(*b*) whether the recent rains (Krithika and Rohini) have further damaged the breached tanks ;

(*c*) if so, the extent of damage done to the breached tanks ;

(*d*) steps they have taken to consolidate the works carried out to repair and restore the tanks breached by the floods of last year in the said district ?

A.—Sri H. K. VEERANNA GOWDH (Minister for Public Works).—

(*a*) 130 tanks have been repaired.

(*b*) No.

(*c*) Does not arise in view of reply to clause (*b*).

(*d*) The temporary ring bunds put up in the case of the tanks referred to at (*a*) above have been removed and permanent repairs effected. No restoration work is called for at this stage.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಕೆರೆಗಳ ರಿಪೇರಿಗೋಸ್ಕರ ಒಟ್ಟು ಖರ್ಚಿನ ಅಂದಾಜು ಎಷ್ಟಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂದಾಜು ಮಾತ್ರ ಮಾಡಲಾಗಿದೆ. ಇನ್ನೂ ಖರ್ಚು ಆಗಿಲ್ಲ. ಇದು ಆಗ ಬೇಕಾಗಿದೆ. ಈ ವಿವರ ನನ್ನ ಹತ್ತಿರ ಈಗ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೆರೆಗಳು ರಿಪೇರಿಯಾಗದೆ ಹಾಗೆಯೇ ಇವೆ ಅಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇವೆಲ್ಲಾ ಬಹಳ ಹಳೆಯ ಕೆರೆಗಳು. ದೊಡ್ಡ ಮಳೆ ಬಂತು. ಹೊದಲು ಯಾವ ರಿಪೇರಿ ಕೆಲಸವಾಗಿರಲಿಲ್ಲ. ಇದು ನಿಮ್ಮ ಅಭಿಪ್ರಾಯದ ಮಾತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಿಪೇರಿಗಾಗಿ ಒಟ್ಟು ಎಷ್ಟು ಖರ್ಚಾಗುವುದು ಸ್ವಾಮಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ವಿವರದ ಪಟ್ಟಿಯನ್ನು ನಾನು ತರಿಸಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೆರೆಯ ತೂಬು, ನಾಲೆ ಮುಂತಾದುವುಗಳನ್ನು ರಿಪೇರಿ ಮಾಡಿಸುವುದಕ್ಕೆ ಮತ್ತು ಕೆರೆಗಳು ಸರಿಯಾದ ಸ್ಥಿತಿಯಲ್ಲಿ ಇರುವ ಹಾಗೆ ಮಾಡಲು ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದೊಂದು ಬಹಳ ದೊಡ್ಡ ಪ್ರಶ್ನೆಯಾಗಿದೆ. ಇದನ್ನೆಲ್ಲಾ ಹಿಂದಕ್ಕೆ ಈ ನಭೆಯಲ್ಲಿ ಎರಡು ಸಾರಿ ವಿವರಗಳನ್ನು ಸದಸ್ಯರ ಮುಂದೆ ಇಟ್ಟು ನಾನು ಅರಿಕೆ ಮಾಡಿಕೊಂಡಿದ್ದೇನೆ. ಕೆರೆಗಳ ರಿಪೇರಿಯ ವಿಚಾರದಲ್ಲಿ ಸರಕಾರದ ಪೂರ್ಣ ಜವಾಬ್ದಾರಿ ಇರುವುದಿಲ್ಲ. ರೈತರ ಮೇಲೂ ಜವಾಬ್ದಾರಿ ಇದೆ. ಇತ್ತೀಚೆಗೆ ರೈತರು ಈ ಕೆಲಸದ ಬಗ್ಗೆ ಸಾಕಷ್ಟು ಗಮನ ಕೊಡುತ್ತಿಲ್ಲ. ಸಣ್ಣಪುಟ್ಟ ಕೆರೆಗಳ ರಿಪೇರಿಯ ಕೆಲಸ ಸರ್ಕಾರ ವಹಿಸಿಕೊಳ್ಳಬೇಕು ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ದೊಡ್ಡ ದೊಡ್ಡ ಕೆರೆಗಳ ಕೆಲಸವು ಪಿ. ಡಬ್ಲ್ಯು. ಇಲಾಖೆಯ ಅಡಳಿತದಲ್ಲಿದೆ. ಅಂಥಾ ದೊಡ್ಡ ದೊಡ್ಡ ಕೆಲಸವನ್ನು ಪಿ. ಡಬ್ಲ್ಯು. ಇಲಾಖೆಯಿಂದ ಮಾಡಲಾಗುತ್ತಿದೆ. ನೀರು ನರಬರಾಜು ಕೆಲಸ ಸಹ ಮಾಡಲಾಗುತ್ತಿದೆ. ನೀರಾವರಿ ಯೋಜನೆಗಳನ್ನೂ ಸಹ ಮಾಡಲಾಗುತ್ತಿದೆ. ರೈತರ ಅನುಕೂಲಕ್ಕಾಗಿ ಎಲ್ಲ ವನ್ನೂ ಮಾಡಲಾಗಿದೆ. ದೊಡ್ಡ ಕೆರೆಗಳ ಜೊತೆಗೆ ಸಣ್ಣ ಕೆರೆಗಳ ರಿಪೇರಿಯ ಕೆಲಸವನ್ನು ತೆಗೆದುಕೊಳ್ಳುವುದು ಯೋಜನೆಯಲ್ಲಿ ಇಲ್ಲ. ಇದಕ್ಕೆ ಸಂಬಂಧಪಟ್ಟ ಒಂದು

(ಶ್ರೀ ಎಚ್. ಕೆ. ವೀರಣ್ಣಗೌಡ)

ಕಾನೂನು ರೋಕೆರ್ ಬೋರ್ಡು ಆಕ್ಟ್ ಎಂಬುದು ಸಭೆಯ ಮುಂದೆ ಬರುವುದಿದೆ. ಸಣ್ಣಸಣ್ಣ ಕೆರೆಗಳ ರಿಪೇರಿ ಕೆಲಸಕ್ಕೆ ಕಂದಾಯದ ಒಂದು ಲಿಮಿಟ್ ಇಟ್ಟುಕೊಂಡು ಅಂಥ ಕೆರೆಗಳ ಕೆಲಸವನ್ನು ಗ್ರಾಮ ಪಂಚಾಯಿತಿಗೆ ವಹಿಸಿಕೊಡಬೇಕೆಂಬ ಆಲೋಚನೆ ಇದೆ. ಈ ಕಾನೂನು ಜಾರಿಗೆ ಬಂದ ಮೇಲೆ ಆಲೋಚನೆಮಾಡಿ ಯಾವ ಯಾವ ಕೆರೆಗಳ ಕೆಲಸವನ್ನು ಇರಾಖೆಯ ಮುಖಾಂತರ ಪ್ರತಿ ವರ್ಷ ನಡೆಸಬೇಕು ಮತ್ತು ಗ್ರಾಮಪಂಚಾಯಿತಿಗಳಿಗೆ ಯಾವ ಯಾವ ಕೆರೆಗಳನ್ನು ವಹಿಸಿಕೊಡಬೇಕು ಎಂಬುದ ನಿರ್ಧಾರವಾಗಬೇಕಾಗಿದೆ.

ಶ್ರೀ ಡಿ. ಅಬ್ದುಲ್ ರಷೀದ್.—ಕೋಲಾರ ಜಿಲ್ಲೆಯಲ್ಲಿ ಇನ್ನೂ ಎಷ್ಟು ಕೆರೆಗಳ ರಿಪೇರಿಯಾಗಬೇಕಾಗಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇನ್ನೂ ಮೂರು ಕೆರೆಗಳ ರಿಪೇರಿ ಮಾಡಬೇಕಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಜ್ಯೂಡಿ ತೆಗೆದು ಕೊಂಡು ಸರ್ಕಾರ ಈ ಕೆಲಸವನ್ನು ವಹಿಸಿಕೊಂಡಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಭೆಯಲ್ಲಿ ಹಿಂದಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಈ ತಾಂತ್ರಿಕ ಕಾರಣಕ್ಕೋಸ್ಕರ ಹಿಂತೆಗೆದುಕೊಳ್ಳಲು ಸರ್ಕಾರ ಸಿದ್ಧವಿಲ್ಲ.

Sri C. J. MUCKANNAPPA.—What is the total achucut?

ಶ್ರೀ ಎಚ್. ಕೆ. ವೀರಣ್ಣಗೌಡ.—130 ಕೆರೆಗಳಿಗೆ ಸಂಬಂಧಪಟ್ಟ ಇದೊಂದು ದೊಡ್ಡ ಪ್ರಶ್ನೆ. ಎಲ್ಲವನ್ನು ನೋಡಿ ಹೇಳಬೇಕಾಗುತ್ತದೆ.

ಶ್ರೀ ಎಂ. ಎನ್. ನಾಗನೂರ.—ಏನಾದರೂ ಕಾಂಟ್ರಿಬ್ಯೂಷನ್ ಇದೆಯೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಶ್ನೆ ಬರುವುದಿಲ್ಲ. ಕೆರೆಗಳ ರಿಪೇರಿ ಮಾಡುವುದರಿಂದ ನೀರು ಹಿಡಿಯುವ ಕೆಪಾಸಿಟಿ ಹೆಚ್ಚಾಗಿ ನೀರಾವರಿ ಉಪಯೋಗವಾಗುವಂತಾದರೆ ಸರ್ಕಾರಿ ಖರ್ಚಿನಿಂದ ರಿಪೇರಿಯ ಕೆಲಸ ಮಾಡಲಾಗುವುದು.

ಶ್ರೀ ಡಿ. ಅಬ್ದುಲ್ ರಷೀದ್.—ಕೈಪಾಸಿಟಿ ಹೆಚ್ಚಿಸುವುದಕ್ಕೆ ಸರ್ಕಾರ ಏನು ಏರ್ಪಾಡು ಮಾಡಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸಾಮಾನ್ಯವಾಗಿ ಎಲ್ಲ ಸಂದರ್ಭಗಳಲ್ಲೂ ಅದನ್ನು ಹೆಚ್ಚಿಸುವುದಕ್ಕಾಗುವುದಿಲ್ಲ. ಒಂದೊಂದು ಕೆರೆಯನ್ನು ನೋಡಿ ಮುಂದಿನ ಕೆಲಸವನ್ನು ಕೈಕೊಳ್ಳಬೇಕು. ಕೆಲವು ವರ್ಷಗಳ ಹಿಂದೆ ಕೆಲವು ಕೆರೆಗಳ ಹೂಳು ತೆಗೆದು ನೋಡಿದೆ. ಆದರೆ ಅದರಿಂದ ಅಷ್ಟಾಗಿ ಪ್ರಯೋಜನವಿಲ್ಲವೆಂದು ಕಂಡು ಬಂದಿದೆ. ಬುರ್‌ಡೋಜರ್ ಮುಖಾಂತರ ಹೂಳು ತೆಗೆದು ಏರಿ ಪಕ್ಕಕ್ಕೆ ಹಾಕಿದರೆ ಮಳೆ ಬಂದಾಗ ಮತ್ತೆ ಆ ಮಣ್ಣು ಕೆರೆಗೇ ಬಂದುಬಿಡುತ್ತದೆ. ಈಚೆಗೆ ಈ ವರ್ಷ—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರಬಹುದು—ಅಲ್ಲಿ ರೈತರು. ಹೂಳನ್ನು ತೆಗೆದು ಗಾಡಿಗಳಲ್ಲಿ ತುಂಬಿಕೊಂಡು ಹೋಗುತ್ತೇವೆ, ಹೂಳನ್ನು ತೆಗೆಸಲು ಆಗುವ ಖರ್ಚಿನಲ್ಲಿ ಸ್ವಲ್ಪ ಭಾಗವನ್ನು ತಮಗೇ ಏಕೆ ಕೊಡಬಾರದು ಎಂದು ಹೇಳಿ ಪರೀಕ್ಷಾರ್ಥವಾಗಿ ಎರಡು ಮೂರು ಕೆರೆಗಳಲ್ಲಿ ಈ ಕೆಲಸ ಮಾಡುತ್ತಿದ್ದಾರೆ. ಅದು ಯಶಸ್ವಿಯಾಗುವುದಾದರೆ ಇತರ ಕಡೆಗಳಲ್ಲೂ ಆ ರೀತಿ ಮಾಡಬಹುದು. ಆಮೇಲೆ ಕೋಡಿ ಮತ್ತು ಏರಿ ಉಡಾವಣೆ ಮಾಡುವುದರಿಂದ ಸ್ವಲ್ಪ ಹೆಚ್ಚು ನೀರು ಕೆರೆಗಳಲ್ಲಿ ನಿಂತು ಅನುಕೂಲವಾಗುತ್ತದೆಂದು ಹೇಳುತ್ತಾರೆ. ಆದರೆ ಹಾಗೆ ಮಾಡುವಾಗ ಎಷ್ಟು ತೋಟ, ಗದ್ದೆ ಮುಳುಗಡೆಯಾಗುತ್ತವೆ, ರಸ್ತೆಗಳಿಗೆ ಎಷ್ಟು ಕೆಡೆ ತೊಂದರೆಯಾಗುತ್ತದೆ ಎಂಬುದನ್ನೆಲ್ಲಾ ನೋಡದೆ ಕೆಪಾಸಿಟಿ ಹೆಚ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ಎಷ್ಟು ಕೆರೆಗಳನ್ನು ದುರಸ್ತು ಮಾಡಲು ಅಂದಾಜಾಗಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—130 ಕೆರೆಗಳ ರಿಪೇರಿಯಾಗಿದೆ. ಇನ್ನೂ 13 ಕೆರೆಗಳ ಬಗ್ಗೆ ಅಂದಾಜಾಗಿದೆ.

ಶ್ರೀ ಎ. ಮುನಿಯಪ್ಪ.—ಎಸ್ಟಿಮೇಟ್ ತಯಾರಾಗಿದ್ದರೆ ಖರ್ಚೆಷ್ಟು?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂದಾಜು ಮುಂಜೂರಾಗಿ ಆಮೇಲೆ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಎ. ಮುನಿಯಪ್ಪ.—ಅಂದಾಜು ಮಂಜೂರಾಗಿದ್ದರೂ ಕೆರೆಯ ರಿಪೇರಿ ಮಾಡದಿರುವುದರಿಂದ ತೊಂದರೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿಲ್ಲ. ಕಂಟ್ರಾಕ್ಟರುಗಳಿಂದ ಟೆಂಡರ್ ಕರೆಯುವುದು ಮುಂತಾದ ಪ್ರೊಸೀಜರರ್ ಮ್ಯಾಟರ್ಸ್‌ನಿಂದ ನಿಧಾನವಾಗಿರಬಹುದು. ಅಂಥಾದ್ದನ್ನು ಗಮನಕ್ಕೆ ತಂದರೆ ಬೇಗ ಕೆಲಸ ಮಾಡಿನುವುದಕ್ಕೆ ಏರ್ಪಾಡು ಮಾಡಬಹುದು.

ಶ್ರೀ ಎ. ಮುನಿಯಪ್ಪ.—ತಾವು ಆರ್ಡರು ಮಾಡಿ ಜರೂರಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆರ್ಡರು ಮಾಡಬೇಕಾದ ಅಗತ್ಯವಿಲ್ಲ. ಒಂದು ಗೊತ್ತಾದ ಕಾರ್ಯಕ್ರಮದ ಪ್ರಕಾರ ಒಡೆದಿರುವ ಕೆರೆಯ ರಿಪೇರಿ ಮಾಡಬೇಕೆಂದು ಕಡ್ಡಾಯವಾಗಿ ಹೇಳಿದೆ. ಹಾಗೆ ಮಾಡದೆ ಬರ್ಕಾದರೂ ವ್ಯತ್ಯಾಸವಾಗಿದ್ದರೆ ಅದಕ್ಕೆ ತಕ್ಕ ಕ್ರಮ ಕೈಕೊಳ್ಳತ್ತೇವೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಜೋಡಿ ಗ್ರಾಮಗಳಲ್ಲೂ ಸಹ ಕೆಲವು ಕೆರೆಗಳು ಒಡೆದುಹೋಗಿರುವುದು ನಿಜವಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇರಬಹುದು.

ಶ್ರೀ ಡಿ. ಟಿ. ಸೀತಾರಾಮರಾವ್.—ಜೋಡಿ ಗ್ರಾಮಗಳಲ್ಲಿ ಕೆರೆ ಒಡೆದಿರುವ ಸಂದರ್ಭಗಳಲ್ಲಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಜೋಡಿ ಗ್ರಾಮಗಳ ವಿಷಯದಲ್ಲಿ ಪ್ರತ್ಯೇಕವಾಗಿ ಸರ್ಕಾರ ಯೋಚನೆ ಮಾಡಬೇಕಾಗಿಲ್ಲ. ಸಂಸ್ಥಾನದಲ್ಲಿರುವ ಎಲ್ಲ ಕೆರೆಗಳಿಗೂ ಗಮನ ಕೊಡಬೇಕು.

Sri H. M. CHANNABASAPPA.—Will the Government tell me the total number of tanks breached by rains last year in Kolar District?

ಶ್ರೀ ಎಚ್. ಕೆ. ವೀರಣ್ಣಗೌಡ.—130 ಕೆರೆಗಳ ರಿಪೇರಿಯಾಗಿದೆ. ಇನ್ನೂ 13 ಕೆರೆಗಳ ದುರಸ್ತಿಯಾಗಬೇಕು. ಒಟ್ಟು 143 ಕೆರೆಗಳು.

Sri M. C. NARASIMHAN.—Has it come to the notice of the Government that out of 130 tanks said to have been repaired, there are very few tanks coming under jodi villages?

ಶ್ರೀ ಎಚ್. ಕೆ. ವೀರಣ್ಣಗೌಡ.—ಇರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನಾಂತಿ ಗ್ರಾಮ ಗಳಲ್ಲಿರುವ ಕೆರೆಗಳು ಒಡೆದು ಐದಾರು ವರ್ಷಗಳಾದರೂ ಸರ್ಕಾರ ಅದನ್ನು ರಿಪೇರಿ ಮಾಡುತ್ತಿಲ್ಲವೆಂಬುದು ಗಮನಕ್ಕೆ ಬಂದಿಯೇ ?

ಅಧ್ಯಕ್ಷರು.—ಇದು ಕೋಲಾರ ಡಿಸ್ಟ್ರಿಕ್ಟಿಗೆ ಮಾತ್ರ ಸಂಬಂಧಪಟ್ಟಿದೆ.

ಶ್ರೀ ಜೆ. ವೆಂಕಟಪ್ಪ.—ಎಚ್. ಎನ್. ರೋಡ್‌ನಲ್ಲಿ ಒಂದು ಕೆರೆ ಒಡೆದು ಅದರ ರಿಪೇರಿಗೆ ಅಂದಾಜು ಮಂಜೂರಾಗದಿರುವುದು ಗಮನಕ್ಕೆ ಬಂದಿಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಈಗ ಹೇಳಲು ಸಾಧ್ಯವಿಲ್ಲ.

Sri J. B. MALLARADHYA.—The question is about the number of tanks restored and repaired. The answer given is only in respect of tanks repaired. How does it happen ?

Sri H. K. VEERANNA GOWDH.—Very subtle distinction.

Sri J. B. MALLARADHYA.—May I know the increase in the atchkat ?

Mr. SPEAKER.—That does not arise.

Sri J. B. MALLARADHYA.—Then the answer is not specific. The question is about the number of tanks restored.

Sri H. K. VEERANNA GOWDH.—I do admit that there is a difference between restoration and repair. Here, I suppose it is inclusive of both restoration and repair.

Sri J. B. MALLARADHYA.—Is it the view of the Government that there is no distinction between restoration and repair ?

Sri H. K. VEERANNA GOWDH.—I did admit that there was difference.

ಶ್ರೀ ಜಿ. ಎಸ್. ಪುಟ್ಟಣ್ಣಿ.—ನಂಜನ್ಗೂಡು ಜೋಡಿ ಗ್ರಾಮಗಳಲ್ಲಿರುವ ಕೆರೆಗಳು ಎಲ್ಲ ಒಡೆದಿವೆಯೋ ನೋಡಿ ತಕ್ಷಣ ಅವುಗಳ ಜೀರ್ಣೋದ್ಧಾರಮಾಡಲು ಆಜ್ಞೆಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತತ್‌ಕ್ಷಣ ಮಾಡುವುದಕ್ಕಾಗುವುದಿಲ್ಲ. ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು, ಹಣದ ಅನುಕೂಲತೆ ನೋಡಿ ಯಾವುದನ್ನು ಮೊದಲು ಮಾಡಬೇಕೆಂಬುದನ್ನು ಗಮನಿಸಿ ಅದರಂತೆ ಕೆಲಸಮಾಡಬೇಕಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರು ಪ್ರತಿಯೊಂದು ಕೆರೆಯನ್ನೂ ಪರೀಕ್ಷೆಮಾಡಿದ್ದರೆ ಇಷ್ಟೊಂದು ಕೆರೆಗಳು ಒಡೆಯುತ್ತಿದ್ದಿಲ್ಲವೆಲ್ಲಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ತಮ್ಮ ಅಭಿಪ್ರಾಯ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೇರೆ ತಾಲ್ಲೂಕು ಗಳಲ್ಲೂ ಕೂಡ ರೈತರು ಹೂಳು ತೆಗೆದರೆ ಅವರಿಗೆ ಹಣ ಕೊಡುವುದನ್ನು ಯೋಚನೆಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಗತ್ಯವಾಗಿ ಆಗಬಹುದು.

Application for Loan pending in the Central Rural Industrialisation Bank.

Q.—1191. Sri T. TAREGOWDA (Sira).—

Will the Government be pleased to state:—

(*a*) whether they are aware that a good number of loan applications recommended by the Village Group Development Societies in Tumkur district for the agricultural and allied industries are pending in the Central Rural Industrialisation Bank, Bangalore, from the past six months and above;

(*b*) whether the Superintendents of Districts have recommended those cases to the Bank;

(*c*) if so, the reasons for not sanctioning the required loan amounts to the applicants ?

A.—Sri MOHAMED ALI (Minister for Excise and Rural Industries).—

(*a*) Yes.

(*b*) Yes.

(*c*) Loans for agricultural and livestock industries were not sanctioned for want of funds. An amount of Rs. 25 lakhs has since been sanctioned by the Reserve Bank to the Industrial Financing Bank and placed at its disposal; after observing the necessary formalities loan will be sanctioned and disbursed to the applicants.

ಶ್ರೀ ಟಿ. ತಾರೇಗೌಡ.—ಅಲೈಡ್ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಎಷ್ಟು ಸಾಲದ ಅರ್ಜಿಗಳು ಇತ್ಯರ್ಥವಾಗದೆ ಉಳಿದಿವೆ ?

*Sri MOHAMED ALI.—To my knowledge almost all the applications have been disposed of.

Sri T. TARE GOWDA.—May I know the specific number of applications disposed of ?

*Asterisk indicates that the remarks or speeches have not been revised by the Member concerned.